# ಕನ್ನಡದ ಬಹುರೂಪಿ ಚಹರೆಗಳು

**ಪರಧರ್ಮವನ್ನೂ ಪರರ ವಿಚಾರಗಳನ್ನು ಸಹಿಸುವುದೇ ಚೆನ್ನವೆಂದು ಹೇಳಿದವನೇ, ಭಾಷೆಯ ವಿಷಯದಲ್ಲಿ ಒಂದು ಚಹರೆಯನ್ನು ಅಧಿಕೃತಗೊಳಿಸುವುದು ಒಂದು ವೈರುಧ್ಯ.**

ಕಬ್ಬನ್‌ನನ್ನು ಕಮಿಷನರಾಗಿ ನೇಮಿಸಿದರು. ಆತ ಆಡಳಿತದ ದಾಖಲೆಗಳು ಕನ್ನಡ, ಇಂಗ್ಲಿಷು, ಮರಾಠಿ, ಉರ್ದು, ಫಾರಸಿಗಳಲ್ಲಿ ಇರುವುದನ್ನು ಗಮನಿಸಿದ. ಕೂಡಲೇ ಉರ್ದು–ಫಾರಸಿಗಳನ್ನು ಕೈಬಿಟ್ಟು ಮೂರು ಭಾಷೆಗಳಲ್ಲಿ ಮಾತ್ರ ದಾಖಲೆಗಳಿರುವಂತೆ ಆಜ್ಞೆ ಹೊರಡಿಸಿದ. ಬಿಎಂಶ್ರೀಯವರು ಕನ್ನಡ ಲೇಖಕರು ಬಳಸಬೇಕಾದ ಗ್ರಂಥಭಾಷೆಯು 'ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡ' ಆಗಿರಬೇಕೆಂದು ಸೂಚಿಸುವರು. ರಾಜಸೇವಾಸಕ್ತರಾದ ಅವರಿಗೆ ನಾಲ್ವಡಿಯವರು ಕಟ್ಟುತ್ತಿರುವ ಆಧುನಿಕ ಮೈಸೂರು ರಾಜ್ಯಕ್ಕೆ ಬೇಕಾದ ಅಧಿಕೃತ ಭಾಷೆಯನ್ನು ರೂಪಿಸಿಕೊಡುವ ಇರಾದೆಯೂ ಇತ್ತು; ಸಾಹಿತ್ಯದಲ್ಲಿ ರೂಪುಗೊಳ್ಳುವ ಕನ್ನಡವೇ ಆಡಳಿತಕ್ಕೂ ನೆರವಾಗುತ್ತದೆ ಎಂಬ ಆಶಯವಿತ್ತು; ಕನ್ನಡದ ನೂರಾರು ಚಹರೆಗಳ ಒಳನುಡಿಗಳನ್ನು ಲೇಖಕರು ಬಳಸುತ್ತ ಹೋದರೆ, ಕರ್ನಾಟಕ ಏಕೀಕರಣಕ್ಕೆ ತೊಡಕಾಗಬಹುದೆಂಬ ಅಳುಕೂ ಇತ್ತು. ಪ್ರಭುತ್ವಗಳು ಮನಸ್ಸು ಮಾಡಿದರೆ ಬಹುಭಾಷಿಕ ಆಡಳಿತವನ್ನು ತರಬಲ್ಲವು. ತ್ರಿಪುರದಲ್ಲಿ ಸೈನೊಬರ್ಮಿ ಕುಟುಂಬಕ್ಕೆ ಸೇರಿದ ಕೊಕ್ ಬರೋಕ್ ಭಾಷೆಯನ್ನೂ ಆಡಳಿತ ಭಾಷೆಯನ್ನಾಗಿಸಲಾಗಿದೆ. ಬಂಗಾಳದಲ್ಲಿ ಬಂಗಾಳಿಯ ಜೊತೆ ನಾಲ್ಕು ಜನಭಾಷೆಗಳಲ್ಲಿ ಆಡಳಿತ ನಡೆಸಲಾಗುತ್ತಿದೆ. ಪ್ರಭುತ್ವದ ನಡೆಯಿಂದ ರೂಪುಗೊಳ್ಳುವ ಭಾಷೆಯ ಚಹರೆಗಳು, ಸಮುದಾಯಗಳ ಬದುಕಿನಿಂದ ರೂಪುಗೊಳ್ಳುವ ಚಹರೆಗಳಿಗಿಂತ ಶಿಕ್ಷಣ ಆಡಳಿತಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ.

## ಪ್ರಜಾಸತ್ತಾತ್ಮಕ ನಡೆ

ಕನ್ನಡವು ಹೀಗೆ ಶತಮಾನಗಳಿಂದ ನಾನಾ ಚಹರೆಗಳನ್ನು ಹುಟ್ಟಿಸುತ್ತ ಕಳೆಯುತ್ತ ಸಂಭಾಳಿಸುತ್ತ ಬಂದಿದೆ. 19ನೇ ಶತಮಾನದ ಮಿಷನರಿಗಳಿಂದ ಶುರುವಾದ, ಚರ್ಚು ಮತ್ತು ಬೈಬಲ್ ಅನುವಾದಗಳಲ್ಲಿರುವ ಕನ್ನಡ; ಕುರಾನಿನ ಅನುವಾದಗಳಲ್ಲಿರುವ ಅರಬಿಗನ್ನಡ; ಪೊಲೀಸು, ರೆವಿನ್ಯೂ ಇಲಾಖೆಯ ದಸ್ತಾವೇಜುಗಳಲ್ಲಿ, ಶಾಸನಗಳಲ್ಲಿ, ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಕೆಯಾಗುವ ಕನ್ನಡ; ಜಾತ್ರೆ ಉರುಸುಗಳ ಕರಪತ್ರ ಕನ್ನಡ; ಕಾಲೇಜು ಕ್ಯಾಂಪಸ್ಸುಗಳಲ್ಲಿ ಚಾಲ್ತಿಯಲ್ಲಿರುವ ಕಂಗ್ಲಿಷು – ಹೀಗೆ ನೂರಾರು ಚಹರೆಗಳಿವೆ. ಪ್ರತಿಯೊಬ್ಬ ಪ್ರತಿಭಾವಂತ ಲೇಖಕರೂ ತಮ್ಮದೇ ಕನ್ನಡ ರೂಪಿಸಿಕೊಂಡಿರುವರು. ವಿವಿಧ ಕನ್ನಡಂಗಳಲ್ಲಿ ರೇಡಿಯೊ–ಟೀವಿ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಸಿನಿಮಾ ನಾಟಕಗಳು ತಯಾರಾಗುತ್ತಿವೆ. ಡಿಜಿಟಲ್ ಮಾಧ್ಯಮವು ಕನ್ನಡದ ಬಹುರೂಪಿ ಚಹರೆಗಳನ್ನು ಅವನ್ನು ಆಡುವವರ ಮುಖಭಾವ ಮತ್ತು ಅವುಗಳ ಧ್ವನಿಸಮೇತ ಕಾಣಿಸುತ್ತಿದೆ. ಕನ್ನಡದ ಈ ಚಹರೆಗಳ ಹಿಂದೆ ಬಿಕ್ಕಟ್ಟುಗಳಿವೆ. ಪ್ರತಿರೋಧದ ಛಲವಿದೆ. ಅಸ್ತಿತ್ವದ ಹೋರಾಟಗಳಿವೆ. ಅಸ್ಮಿತೆಯ ಹುಡುಕಾಟಗಳಿವೆ. ಏಕರೂಪೀಕರಣದ ಒತ್ತಾಸೆಗಳಿವೆ.

ಈ ಬಹುರೂಪೀ ಚಹರೆಗಳ ಗುರುತಿಸುವಿಕೆ ಮತ್ತು ಮನ್ನಿಸುವಿಕೆಯು, ಭಾಷಿಕ ಬಹುತ್ವದ ಶೋಧ ಮಾತ್ರವಲ್ಲ, ಕರ್ನಾಟಕದೊಳಗಿರುವ ಸಾಂಸ್ಕೃತಿಕ ಬಹುತ್ವದ ಜೀವನದೃಷ್ಟಿಗಳ, ಸಮುದಾಯಗಳ, ಹಲವು ಜ್ಞಾನ ಮತ್ತು ಕುಶಲತೆಗಳ, ಬದುಕಿನ ಕ್ರಮ ಮತ್ತು ದೃಷ್ಟಿಕೋನಗಳ, ಸಂಸ್ಕೃತಿ ಮತ್ತು ಕೂಡುಬಾಳಿನ ಪರಿಗಳ ಹುಡುಕಾಟ ಕೂಡ. ಹಲವು ಬಗೆಯ ಸೇವೆ ಸರಕುಗಳ ಸೃಷ್ಟಿಯಿಂದ, ದುಡಿಮೆಗಳಿಂದ ನಾಡಿನ ಸಂಪತ್ತು ನಿರ್ಮಾಣವಾಗುವಂತೆ, ಹಲವು ಭಾಷೆ ಸಮುದಾಯ ಪ್ರಾದೇಶಿಕತೆಗಳಿಂದ ದೇಶವು ನಿರ್ಮಾಣವಾಗುತ್ತದೆ. ಭಾರತದ ಪ್ರಜಾಪ್ರಭುತ್ವದ ಜೀವಂತಿಕೆಯನ್ನು ಅದರ ಫೆಡರಲ್ ತತ್ವಗಳ ಮೂಲಕ ಮೌಲ್ಯಮಾಪನ ಮಾಡುವ ಪದ್ಧತಿಯಿದೆ. ಇದನ್ನು ನಿರ್ದಿಷ್ಟ ಭಾಷೆಯು ಸಹಭಾಷೆಗಳ ಮತ್ತು ತನ್ನದೇ ಒಳಚಹರೆಗಳ ಜತೆಗಿನ ಸಂಬಂಧವನ್ನು ಹೇಗೆ ನಿಭಾಯಿಸುತ್ತಿದೆ ಎಂಬುದರ ಮೂಲಕವೂ ಬೆಲೆಗಟ್ಟಬಹುದು. ●